**ಪಿ.ಡಬ್ಲೂ. 1**

ಇಂದು ದಿಃ **28.10.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಿಂದ.**

1. ಅಪಘಾತ ದಿಃ 28.04.2022 ರಂದು ಆಗಿರುತ್ತದೆ. ಅಪಘಾತವಾದ ಮರುದಿನ ನಾನೇ ದೂರನ್ನು ನೀಡಿರುತ್ತೇನೆ. ನಾನು ಆಸ್ಪತ್ರೆಯಲ್ಲಿ ಇದ್ದೆ ನನ್ನ ಅಳಿಯ ಹೊಗಿ ದೂರನ್ನು ನೀಡಿರುತ್ತಾರೆ. ನನ್ನ ಅಳಿಯ ಅಪಘಾತ ನೊಡಿಲ್ಲ ಎಂದರೆ ಸರಿ. ಅಪಘಾತ ರಾತ್ರಿ 8.30 ಕ್ಕೆ ಆಗಿರುತ್ತದೆ. ಅಪಘಾತವಾದ ರಸ್ತೆ ಧಾರವಾಡ ಸವದತ್ತಿ ರಸ್ತೆ ದುರ್ಗಾದೇವಿ ದೇವಸ್ಥಾನದ ಹತ್ತಿರ ಎಂದರೆ ಸರಿ. ಸದರಿ ರಸ್ತೆ ಅಗಲವಾದ ಟಾರ್ ರಸ್ತೆ ಎಂದರೆ ಸರಿ. ಅದರಲ್ಲಿ ಎರಡು ದೊಡ್ಡ ವಾಹನಗಳು ಹೊಗಬಹುದು ಎಂದರೆ ಸರಿ. ಅಲ್ಲಿ ದಾರಿದೀಪಗಳು ಇವೆ ಎಂದರೆ ಸರಿಯಲ್ಲ. ದುರ್ಗಾದೇವಿ ದೇವಸ್ಥಾನದಲ್ಲಿ ಲೈಟ ಇದೆ ಎಂದರೆ ಸರಿಯಲ್ಲ. ನಾನು ಚಲಾಯಿಸುತ್ತಿದ್ದ ಬೈಕ ನಂ.6900. ಸದರಿ ವಾಹನಕ್ಕೆ ಹೆಡ್ ಲೈಟ್ ಇತ್ತು. ಅದನ್ನು ಚಲಾಯಿಸುವಾಗ ರಸ್ತೆ ಕಾಣುತ್ತಿತ್ತು ಎಂದರೆ ಸರಿ. ಅಪಘಾತವಾದ ನಾನೇ ಜೊರಾಗಿ ಗಾಡಿ ಓಡಿಸಿ ಬಿದ್ದು ಗಾಯ ಮಾಡಿಕೊಂಡಿದ್ದೆನೆ ಎಂದರೆ ಸರಿಯಲ್ಲ. ಸದರಿ ಅಪಘಾತ ನಾನೇ ಮಾಡಿಕೊಂಡಿದ್ದು ಅದ್ದರಿಂದ ಪರಿಹಾರಕ್ಕಾಗಿ ತಡವಾಗಿ 1 ನೇ

**ಪಿ.ಡಬ್ಲೂ. 1**

ಎದುರುದಾರರ ವಾಹನದ ಮೇಲೆ ಸುಳ್ಳು ದೂರು ನೀಡಿದ್ದೆನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುುವ ಉದ್ದೆಶದಿಂದ ನಾನು , 1 ನೇ ಎದುರುದಾರರು ಸೇರಿಕೊಂಡು ಸುಳ್ಳು ದೂರು ನೀಡಿದ್ದೆವೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಒಂದು ವೇಳೆ ವಾಹನವನ್ನು ಅಲ್ಲಿ ನಿಲ್ಲಿಸಿದ್ದರಿಂದ ಅವರು ಪಾರ್ಕಿಂಗ ಲೈಟ ಹಾಕಿ ನಿಲ್ಲಿಸುತ್ತಿದ್ದರು ಸಾಕ್ಷಿ ಅ ದಿನ ಅವರು ಲೈಟ ಹಾಕಿರಲಿಲ್ಲ ಎನ್ನುತ್ತಾರೆ. ಸದರಿ ಅಪಘಾತ 1 ನೇ ಎದುರುದಾರನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ.

2. ನಾನೇ ಜೊರಾಗಿ ವಾಹನ ಚಲಾಯಿಸಿ ನಿಂತರುವ ವಾಹನಕ್ಕೆ ಹಿಂದಿನಿಂದ ಡಿಕ್ಕಿ ಪಡಿಸಿದ್ದೆನೆ ಎಂದು ಹೇಳಿ ಪೋಲಿಸರವರು ಒಂದು ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾನು ಆ ದಿನ ವಾಹನವನ್ನು ನಿದಾನವಾಗಿ ಚಲಾಯಿಸುತ್ತಿದ್ದೆ ಎಂದು ಹೇಳುತ್ತಾರೆ. ಇದೇ ನ್ಯಾಯಾಲಯದಲ್ಲಿ ನಾನು ತಪ್ಪು ಒಪ್ಪಿಕೊಂಡಿದ್ದೆನೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ಗೊತಿತದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಅಪಘಾತವಾದ ನತಂರ ನಾನು ಸುಲ್ತಾನಪೂರಿ ಆಸ್ಪತ್ರೆಗೆ ಹೋಗಿದ್ದು ಅಲ್ಲಿಂದ ಶೇಖ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ಸುಲ್ತಾನಪೂರಿ ಆಸ್ಪತ್ರೆಯಲ್ಲಿ

ನಾನು 15 ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿದ್ದೆ. ಸದರಿ ಆಸ್ಪತ್ರೆಯಲ್ಲಿ ನಾನು 10 ದಿನ ಮಾತ್ರ ಇದ್ದೆ ಎಂದರೆ ಸರಿ. ಶೇಖ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದ್ಾಖಲೆ ಹಾಜರು ಮಾಡಿಲ್ಲ ಎಂರದೆ ಸಾಕ್ಷಿ ಸುಲ್ತಾನಪೂರಿ ಆಸ್ಪತ್ರೆಯಿಂದ ನನ್ನನ್ನು ಅಲ್ಲಿ ಕರೆದುಕೊಂಡು ಹೊಗಿ ಶ್ರಸ್ತ ಚಿಕಿತ್ಸೆ ಮಾಡಿದ್ದಾರೆ ಎನ್ನುತ್ತಾರೆ. ಅಪಘಾತದಲ್ಲಿ ನನಗೆ ಸಣ್ಣ ಪುಟ್ಟ ಗಾಯಗಳು ಆಗಿದ್ದವು ಎಂದರೆ ಸರಿಯಲ್ಲ. ದಾಖಲೆಯಲ್ಲಿ ಹಾಜರುಪಡಿಸಿರುವ ಗಾಯಕ್ಕೂ ಹಾಗೂ ಅಪಘಾತದಲ್ಲಿ ಅದ ಗಾಯಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ 1 ಲಕ್ಷ ರೂ. ವ್ಯಯಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ವೈದ್ಯಕಿಯ ದಾಖಲೆಗಳು ಸೃಷ್ಟಿ ಮಾಡಿರುವ ದಾಖಲೆಗಳು ಎಂದರೆ ಸರಿಯಲ್ಲ.

4. ನಿಪಿ.10 ಸೃಷ್ಟಿ ಮಾಡಿದ ದಾಖಲೆ ಎಂದರೆ ಸರಿಯಲ್ಲ. ಸದರಿ ಅಪಘಾತದಿಂದ ನನಗೆ ಯಾವುದೇ ಅಂಗನ್ಯೂನ್ಯತೆ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕಿಂತ ಮೊದಲು ನಾನು ಕಟ್ಟಡ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದೆ ಹಾಗೂ ಪ್ರತಿ ತಿಂಗಳು 25 ಸಾವಿರ ತೆಗೆದುಕೊಳ್ಳುತ್ತಿದ್ದೆ ಎಂದು ದಾಖಲೆ

ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನಾನು ಮೊದಲಿನ ತರಹನೇ ಇದ್ದೆನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರ ದ

**ಪಿ.ಡಬ್ಲ್ಯೂ. 1**

ವಿಷಗಳು ಸುಳ್ಳಿನಿಂದ ಕೂಡಿವೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ 1 ನೇ ಎದುರುದಾರರ ವಿರುದ್ಧ ಸುಳುಳ ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(**ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**).

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ)**
4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.